7ನೇ ತರಗತಿ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟದ ಜೊತೆಗೆ ಒಂದು ಕೋಳಿ ಮೊಟ್ಟೆ / ಮೊಟ್ಟೆ ತಿನ್ನದವರಿಗೆ ಬಾಳೆಹಣ್ಣು ನೀಡುವ ಬಗ್ಗೆ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸಲಾಗಿತ್ತು ಈಗ ಅದಕ್ಕೆ ತಡೆಯಾಜ್ಞೆ ನೀಡಲಾಗಿದೆ

ಆ)ಹೌದು

ಇ) ಚರ್ಚೆಯ ಹಂತದಲ್ಲಿದೆ

44 (92) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಭಾಷಾ ನೀತಿಯನ್ನು ಉಲ್ಲಂಘನೆ ಮಾಡಿರುವ ಎಷ್ಟು ಪ್ರಕರಣಗಳು ಪತ್ತೆಯಾಗಿವೆ , (ಶಾಲೆಯ ಹೆಸರು ಮತ್ತು ವಿವರಗಳನ್ನು ಜಿಲ್ಲಾವಾರು ಅಂಕಿ ಅಂಶಗಳಲ್ಲಿ ಒದಗಿಸುವುದು) ,

ಆ) ಈ ನೀತಿಯ ಉಲ್ಲಂಘನೆಗಾಗಿ ನಿಯಮಗಳಲ್ಲಿ ಯಾವ ರೀತಿಯ ಕ್ರಮಕ್ಕೆ ಅವಕಾಶವಿದೆ ,

ಇ) ಇದರ ಅನ್ವಯ ಸರ್ಕಾರ ಇಲ್ಲಿಯವರೆವಿಗೆ ಯಾವ ಶಿಸ್ತು ಕ್ರಮಗಳನ್ನು ಕೈಗೊಂಡಿದೆ (ಪೂರ್ಣ ವಿವರಗಳನ್ನು ಒದಗಿಸುವುದು) ,

ಈ) ಸರ್ಕಾರವು ಮುಂದಿನ ಶೈಕ್ಷಣಿಕ ವರ್ಷದಿಂದ ಭಾಷಾ ನೀತಿಯ ಉಲ್ಲಂಘನೆಯನ್ನು ಕಟ್ಟುನಿಟ್ಟಾಗಿ ತಡೆಗಟ್ಟಲು ಯಾವ ಕ್ರಮಗಳನ್ನು ಕೈಗೊಳ್ಳುವುದು ?

ಶ್ರೀ ಬಿ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) 2698 (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಆ) ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಸೆಕ್ಷನ್ 34 ರನ್ವಯ ಭಾಷಾ ನೀತಿ ಉಲ್ಲಂಘನೆ ಮಾಡಿದ ಶಾಲೆಗಳ ನೋಂದಣಿ ಮತ್ತು ಸೆಕ್ಷನ್ 39 ರಡಿ ಮಾನ್ಯತೆ ಹಿಂಪಡೆಯಲು ಅಸ್ಪದ ಇರುತ್ತದೆ

ಇ) ಉಲ್ಲಂಘನೆ ಮಾಡಿದ ಶಾಲೆಗಳಿಗೆ ನೋಟೀಸ್ ನೀಡಿ ಮಾನ್ಯತೆ ಹಿಂಪಡೆಯಲಾಗಿದೆ (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

ಈ) ಮುಂದಿನ ಶೈಕ್ಷಣಿಕ ವರ್ಷದಿಂದ ಅನುಮತಿ ನೀಡುವಾಗ ಮಾತೃಭಾಷೆ ಅಥವಾ ಕನ್ನಡ ಮಾಧ್ಯಮದಲ್ಲಿ ಬೋಧನೆ ಮಾಡುವುದರ ಬಗ್ಗೆ ಖಚಿತ ಪಡಿಸಿಕೊಳ್ಳಲಾಗುವುದು

ಸದರಿ ಶಾಲೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಶಿಕ್ಷಕರ ಬೋಧನೆ ಮಾಧ್ಯಮದ ಬಗೆಗೆ ಪ್ರತ್ಯೇಕವಾಗಿ ಪರಿಶೀಲಿಸಲಾಗುವುದು

ಮಕ್ಕಳ ನೋಟು ಪುಸ್ತಕ, ಪರೀಕ್ಷಾ ಉತ್ತರ ಪತ್ರಿಕೆಗಳ ಮುಂತಾದವುಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಲಾಗುವುದು

ಭಾಷಾ ನೀತಿಯನ್ನು ಉಲ್ಲಂಘಿಸಿದಲ್ಲಿ ಮೇಲೆ ಉಲ್ಲೇಖಿಸಲಾದ ಉಪಬಂಧಗಳನ್ವಯ ಕ್ರಮವನ್ನು ತೆಗೆದುಕೊಳ್ಳಲಾಗುವುದು

ಅನುಬಂಧ

ವಿಧಾನ ಸಭೆ ಪ್ರಶ್ನೆ ಸಂಖ್ಯೆ – 92 ಕ್ಕೆ

ಕ್ರ ಸಂ	ಜಿಲ್ಲೆಯ ಹೆಸರು	ಮಾನ್ಯತೆ ಹಿಂದಕ್ಕೆ ಪಡೆದ ಶಾಲೆಗಳು	ಈ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳು	ಶಿಕ್ಷಕರ ಸಂಖ್ಯೆ
1	ಬೆಂ ಉತ್ತರ	378	54760	1890
2	ಬೆಂ ದಕ್ಷಿಣ	643	79365	3064
3	ಬೆಂ ಗ್ರಾಮಾಂತರ	147	20824	776
4	ಕೋಲಾರ	92	10840	548
5	ಚಿಕ್ಕಬಳ್ಳಾಪುರ	73	9948	454
6	ತುಮಕೂರು	137	10479	688
7	ಮಧುಗಿರಿ	81	9014	479
8	ಶಿವಮೊಗ್ಗ	27	8583	176
9	ಚಿತ್ರದುರ್ಗ	14	1978	77
10	ದಾವಣಗೆರೆ	28	3698	144
11	ಮೈಸೂರು	14	2831	104
12	ಚಾಮರಾಜನಗರ	2	150	15
13	ಮಂಡ್ಯ	6	770	35

14	ಹಾಸನ	69	6488	346
15	ಚಿಕ್ಕಮಗಳೂರು	21	2650	113
16	ಕೊಡಗು	31	3700	185
17	ದಕ್ಷಿಣ ಕನ್ನಡ	0	0	0
18	ಉಡುಪಿ	16	2474	120
19	ಬೆಳಗಾಂ	11	3506	72
20	ಚಿಕ್ಕೋಡಿ	0	0	0
21	ಬಿಜಾಪೂರ	26	2842	73
22	ಬಾಗಲಕೋಟೆ	36	8600	218
23	ಧಾರವಾಡ	14	2146	77
24	ಗದಗ	10	1847	74
25	ಹಾವೇರಿ	1	329	8
26	ಉತ್ತರ ಕನ್ನಡ	10	2744	101
27	ಗುಲ್ಬರ್ಗಾ	38	6168	304
28	ಯಾದಗಿರಿ	18	2812	77
29	ಬಳ್ಳಾರಿ	99	17208	917
30	ರಾಯಚೂರು	81	9069	226
31	ಕೊಪ್ಪಳ	31	5667	186
32	ಬೀದರ್	61	6798	261
	ಒಟ್ಟು	2215	308524	11808

45 (95) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ (ಬ್ರಹ್ಮಾವರ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) 2006–07ನೇ ಸಾಲಿನಲ್ಲಿ ಎಷ್ಟು ಹೊಸ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜಿಗೆ ಅನುಮತಿ ನೀಡಲಾಗಿದೆ (ಕ್ಷೇತ್ರವಾರು ವಿವರ ನೀಡುವುದು) ,

ಆ) ಪ್ರೌಢ ಶಾಲೆ ಮತ್ತು ಪದವಿ ಪೂರ್ವ ಕಾಲೇಜನ್ನು ಮಂಜೂರು ಮಾಡಲು ಇರುವ ಮಾನದಂಡಗಳೇನು ?